**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ.**

**ಸಿ.ಸಿ ಸಂಖ್ಯೆ ::611/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ನಾಗೇಶ | **PW**- 02 |
| **ತಂದೆಯ ಹೆಸರು** | : | ಬೆಳ್ಳನಗೌಡ | **CW**-03 |
| **ವಯಸ್ಸು** | : | 51 ವರ್ಷ | |
| **ಉದ್ಯೋಗ** | : | ವ್ಯವಸಾಯ | |
| **ವಾಸಸ್ಥಳ** | : | ತೆಕ್ಕೂರು, ಶೃಂಗೇರಿ ತಾ. | |

**ದಿನಾಂಕಃ07-03-026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ ::A.P.P ರವರಿಂದ ::**

ದಿಃ16-04-2024 ರಂದು ಮಧ್ಯಾಹ್ನದ ಸಮಯದಲ್ಲಿ ನಾನು ಲೋಕಸಭಾ ಸಾರ್ವತ್ರಿಕ ಚುನಾವಣೆಯ ಮತದಾನ ಪ್ರಚಾರ ಕಾರ್ಯ ಮುಗಿಸಿಕೊಂಡು ಮನೆಗೆ ವಾಪಾಸ್ಸು ಹಿಂದಿರುಗುತ್ತಿದ್ದ ಸಮಯದಲ್ಲಿ ಹಂದಿಬನದ ಬಳಿ ಪೋಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಕರೆದು ನಮ್ಮ ಸಮಕ್ಷಮ ಆರೋಪಿತರ ಕೈಗೆ ತಲಾ 1 ಬಂದೂಕನ್ನು ನೀಡಿ ನಿಂತುಕೊಳ್ಳುವಂತೆ ಸೂಚಿಸಿದರು. ತದ ನಂತರ ನನ್ನನ್ನು ಮತ್ತು ಚಾಸಾ-3 ರವರನ್ನು ಅವರ ಜೊತೆ ನಿಂತುಕೊಳ್ಳುವಂತೆ ಸೂಚಿಸಿದರು. ಆಗ ಪೋಲೀಸರು ಒಂದು ಭಾವ ಚಿತ್ರವನ್ನು ತೆಗೆದುಕೊಂಡರು.

2. ತದ ನಂತರ ಪೋಲೀಸರು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಈಗ ಸಾಕ್ಷಿಗೆ ಸದರಿ ದಾಖಲೆಯನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಸದರಿ ದಾಖಲೆಯಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು).

**::ಪಾಟೀಸವಾಲು :: A.P.P ರವರಿಂದ ::**

ದಿಃ 16-04-2024 ರಂದು ಪೋಲೀಸರು ಆರೋಪಿತರಿಂದ ಅಕ್ರಮವಾಗಿ ತಮ್ಮ ಸ್ವಾಧೀನಾನುಭವದಲ್ಲಿದ್ದ 1) 2 ಎಸ್. ಬಿ. ಎಂ. ಎಲ್ ಬಂದೂಕುಗಳು, 2) ಸುಮಾರು 50 ಗ್ರಾಂ ನಷ್ಟು ಮಸಿ ಪೌಡರ್, 3) ಸುಮಾರು 10 ಗ್ರಾಂ ನಷ್ಟು ಮಸಿ ಪೌಡರ್, 4) 8 ಗುಂಡುಗಳು, 5) 27 ದಪ್ಪ ಚರೆಗಳು, 6) 36 ಸಣ್ಣ ಚರೆಗಳು, 7) 24 ಕೇಪುಗಳು ಈ ವಸ್ತುಗಳನ್ನು ನಮ್ಮ ಸಮಕ್ಷಮ ಪೋಲೀಸರು ಆರೋಪಿತರಿಂದ ಅಮಾನತು ಪಡಿಸಿಕೊಂಡು ಸ್ಥಳದಲ್ಲಿಯೇ ಮಧ್ಯಾಹ್ನ 1.30 ರಿಂದ 3.00 ಗಂಟೆ ವರೆವಿಗೂ ಅಮಾನತು ಪಂಚನಾಮೆಯನ್ನು ದಾಖಲಿಸಿಕೊಂಡು ನಮ್ಮ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ತೋರಿಸಲಾದ ಸದರಿ ವಸ್ತುಗಳನ್ನು ನೋಡಿ ಗುರುತಿಸಿರುವುದಿಲ್ಲ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ. H.R.U ವಕೀಲರಿಂದ ::**

**( ಪಾಟೀ ಸವಾಲು ಇರುವುದಿಲ್ಲ)**

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.